<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,</u>
<u>ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು</u>

**S.C. No. 106/2024**

| ಸಾಕ್ಷಿಯ ಹೆಸರು | ಶ್ರೀ ಸಿ.ಎಂ.ಮಠಪತಿ | ಚಾಸಾಃ | ಪ್ರಾಸಾಃ |
|---|---|---|---|
| ತಂದೆಯ ಹೆಸರು | ಲೇಟ್ ಮಲ್ಲಯ್ಯ | 5 | 3 |
| ವಯಸ್ಸು | 36 ವರ್ಷ | ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು. ದಿನಾಂಕ **17.03.2026.** | |
| ಉದ್ಯೋಗ | ಪಿಎಸ್ಐ, ಕಾಡುಗೋಡಿ ಪೊಲೀಸ್ ಠಾಣೆ | | |
| ವಾಸ ಸ್ಥಳ | ಬೆಂಗಳೂರು | | |

<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>

ಜುಲೈ 2022 ರಿಂದ ಇಲ್ಲಿಯವರೆಗೆ ನಾನು ಕಾಡುಗೋಡಿ ಪೊಲೀಸ್ ಠಾಣೆಯಲ್ಲಿ ಪಿಎಸ್ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ 30.11.2022 ರಂದು ಸಂಜೆ 7.30 ಗಂಟೆಗೆ ನಾನು ಠಾಣೆಯಲ್ಲಿರುವಾಗ ಪಿರ್ಯಾದಿ ರಾಜು ಜಿ. ಠಾಣೆಗೆ ಹಾಜರಾಗಿ ಕೊಟ್ಟಂತಹ ಲಿಖಿತ ದೂರನ್ನು ಪಡೆದುಕೊಂಡು ಮೊಕದ್ದಮೆ ಸಂಖ್ಯೆ 238/2022 ಪ್ರಕರಣ ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿ ನ್ಯಾಯಾಲಯಕ್ಕೂ ಮತ್ತು ಮೇಲಧಿಕಾರಿಗಳಿಗೆ ಸಲ್ಲಿಸಿರುತ್ತೇನೆ. ದೂರನ್ನು ನಿಶಾನೆ ಪಿ5 ಎಂದು, ಸಹಿಯನ್ನು ನಿಶಾನೆ ಪಿ5(ಎ) ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ನಿಶಾನೆ ಪಿ6 ಎಂದು, ಸಹಿಯನ್ನು ನಿಶಾನೆ ಪಿ6(ಎ) ಎಂದು ಗುರುತಿಸಲಾಯಿತು.

ದಿನಾಂಕ 01.12.2022 ರಂದು ಕೃತ್ಯ ನಡೆದ ಸ್ಥಳ ವೈಟ್ ಫೀಲ್ಡ್ ಮತ್ತು ಹೊಸಕೋಟೆ ರಸ್ತೆಯ ಸಾಯಿ ಆಶ್ರಮದ ಬಳಿ ಪಿರ್ಯಾದಿ ತೋರಿಸಿದ ಸ್ಥಳದಲ್ಲಿ ಪಂಚರಾದ ಚಾಸಾ 2 ಮತ್ತು 3 ರವರ ಸಮಕ್ಷಮ ನಿಶಾನೆ ಪಿ3 ರಂತೆ ಪಂಚನಾಮೆಯನ್ನು ಮಧ್ಯಾಹ್ನ 3-5 ಗಂಟೆಯವರೆಗೆ ಮಾಡಿದ್ದು, ಸಹಿಯನ್ನು ನಿಶಾನೆ ಪಿ3(ಬಿ) ಎಂದು ಗುರುತಿಸಲಾಯಿತು. ಪಂಚರಿಗೆ ಕೊಟ್ಟ ನೋಟೀಸ್ ನಿಶಾನೆ ಪಿ2

ಆಗಿದ್ದು, ಅದರಲ್ಲಿರುವ ಸಹಿಯನ್ನು ನಿಶಾನೆ ಪಿ2(ಬಿ) ಎಂದು ಗುರುತಿಸಲಾಯಿತು. ಅದೇ ದಿನ ಪಂಚರ ಹೇಳಿಕೆಯನ್ನು ಮಾಡಿಕೊಂಡೆ.

ದಿನಾಂಕ 25.12.2022 ರಂದು ಆರೋಪಿತರು ನಿರೀಕ್ಷಣಾ ಜಾಮೀನು ಪಡೆದುಕೊಂಡು ಹಾಜರಾಗಿದ್ದು, ನ್ಯಾಯಾಲಯದ ಆದೇಶ ಪಾಲಿಸಿದೆ.

ದಿನಾಂಕ 18.07.2023 ರಂದು ಕೆ.ಆರ್.ಪುರಂ ಸರ್ಕಾರಿ ಆಸ್ಪತ್ರೆಯಿಂದ ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡಿದ್ದು, ಅದರಲ್ಲಿರುವ ಸಹಿಯನ್ನು ನಿಶಾನೆ ಪಿ1(ಬಿ) ಎಂದು ಗುರುತಿಸಲಾಯಿತು. ದಿನಾಂಕ 18.12.023 ರಂದು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದೆನು. ಪ್ರಾಸಾ 2 ನಿಶಾನೆ ಪಿ4 ರಂತೆ ಹೇಳಿಕೆ ಕೊಟ್ಟಿರುತ್ತಾರೆ. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ಸಾಕ್ಷಿ ಗುರುತಿಸಿದ್ದಾರೆ.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ.ಪಿ.ಆರ್.ಆರ್. ವಕೀಲರಿಂದ:</u>

ದಿನಾಂಕ 18.11.2022 ರಂದು 1 ನೇ ಆರೋಪಿ ನಮ್ಮ ಇಲಾಖೆಯಲ್ಲಿ ಸಬ್ ಇನ್ಸ್ ಪೆಕ್ಟರ್ ಆಗಿದ್ದರು ಎಂದರೆ ಸರಿ. ನಾನು 1 ನೇ ಆರೋಪಿ ಪಿಎಸ್ಐ ಎಂದು ತನಿಖೆ ಕಾಲದಲ್ಲಿ ನಮೂದು ಮಾಡಿಲ್ಲ. ನನ್ನ ತನಿಖಾ ಕಾಲದಲ್ಲಿ ದಿನಾಂಕ 18.11.2022 ರಂದು 1 ನೇ ಆರೋಪಿ ಕರ್ತವ್ಯದಲ್ಲಿ ಇದ್ದರೋ ಅಥವಾ ಘಟನಾ ಸ್ಥಳಕ್ಕೆ ಹೋಗಿದ್ದರೋ ಎಂಬ ಬಗ್ಗೆ ನಾನು ತನಿಖೆ ಮಾಡಿಲ್ಲ. ಈಗ ನನಗೆ ತೋರಿಸಿದ ದಾಖಲೆ ನಮ್ಮ ಇಲಾಖೆಯಿಂದ ಕೊಟ್ಟಿರುವ ಹಾಜರಾತಿ ಪ್ರಮಾಣಪತ್ರ ಆಗಿದ್ದು, ಆ ದಿನಾಂಕ 18.11.2022 ರಿಂದ 30.11.2022 ರವರೆಗೆ ಬೆಳಗ್ಗೆ 8 ರಿಂದ ಸಂಜೆ 7.00 ಗಂಟೆಯವರೆಗೆ ಕರ್ತವ್ಯ ಮಾಡಿರುವ ಬಗ್ಗೆ ಇದೆ ಎಂದರೆ ಸರಿ. ಸದರಿ ದಾಖಲೆಯನ್ನು ನಿಶಾನೆ ಡಿ1 ಎಂದು ಗುರುತಿಸಲಾಯಿತು. ಸಾಕ್ಷಿದಾರರು ಖುದ್ದಾಗಿ 1 ನೇ ಆರೋಪಿಯನ್ನು ಘಟನಾ ಸ್ಥಳದಲ್ಲಿ ನೋಡಿದ್ದೇವೆ ಎಂದು ಹೇಳಿದರು ಎಂದರೆ ಸರಿಯಲ್ಲ. ಪಂಚನಾಮೆ ಕಾಲಕ್ಕೆ ನಕ್ಷೆ ತಯಾರಿಸಬೇಕೆಂದು ಪೊಲೀಸ್ ಮ್ಯಾನುವಲ್ ನಲ್ಲಿ ಇದೆ ಎಂದರೆ ಸರಿ. ನನಗೆ ಆ ಬಗ್ಗೆ ಗೊತ್ತು ಎಂದರೆ ಸರಿ. ನಾನು ಈ ಪ್ರಕರಣದಲ್ಲಿ ನಕ್ಷೆ ತಯಾರಿಸಿಲ್ಲ ಎಂದರೆ ಸರಿ. ನಾನು ಸಾಕ್ಷಿದಾರರನ್ನು ಕರೆದುಕೊಂಡು ಹೋಗಿಲ್ಲ, ಮತ್ತು ಸ್ಥಳಕ್ಕೆ ಹೋಗಿಲ್ಲ ಹಾಗೂ ಆ ಕಾರಣದಿಂದ ನಕ್ಷೆ ತಯಾರಿಸಿಲ್ಲ ಎಂದರೆ ಸರಿಯಲ್ಲ. 2022 ರಲ್ಲಿ ನಾವು FIR ಹಾಕುವುದು, ಸ್ಥಳ ಮಹಜರ್ ಮಾಡುವುದು, ಬೇರೆ ಬೇರೆ ಅಧಿಕಾರಿಗಳು ಹಂಚಿಕೊಂಡಿದ್ದೆವು ಎಂದರೆ ಸರಿಯಲ್ಲ. ಆ

ತಿಂಗಳಿನಲ್ಲಿ ನಾನೇ ಹಲವು ಪ್ರಕರಣಗಳಲ್ಲಿ FIR ಹಾಕಿ, ಸ್ಥಳ ಪಂಚನಾಮೆ ಮಾಡಿರುತ್ತೇನೆ. ನಾನು ಬಾಲಾಜಿ ಹೋಟೆಲ್ ಮತ್ತು ಅಕ್ಕಪಕ್ಕದಲ್ಲಿ ಯಾರನ್ನೂ ವಿಚಾರಣೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಸುತ್ತಮುತ್ತ ಅಂಗಡಿಯವರಿಗೆ ನೋಟೀಸ್ ಕೊಡುವ ಪ್ರಯತ್ನ ಮಾಡಿಲ್ಲ. ದೂರು ಕೊಡಲು 12 ದಿನ ತಡ ಆಗಿದೆ ಎಂದರೆ ಸರಿ. ನಾನು ಆ ದೂರು ಕೊಡಲು ತಡವಾಗಲು ಏನು ಕಾರಣ ಎಂದು ದಾಖಲೆಗಳನ್ನು ಪಡೆದುಕೊಂಡಿಲ್ಲ.

ನಿಶಾನೆ ಪಿ2 ರಲ್ಲಿರುವ ಒಕ್ಕಣೆ ನಾನು ಬರೆದಿಲ್ಲ. ಆ ಒಕ್ಕಣೆ ಬರೆದವರನ್ನು ನಾನು ಸಾಕ್ಷಿ ಮಾಡಿಲ್ಲ. ನಾನು ಆರೋಪಿ ಆ ಸ್ಥಳದಲ್ಲಿ ಇದ್ದರೋ ಇಲ್ಲವೋ ಎಂಬ ಬಗ್ಗೆ ಸಿಡಿಆರ್ ಪಡೆದುಕೊಂಡಿಲ್ಲ. ಆರೋಪಿತರ ಸ್ವಇಚ್ಛಾ ಹೇಳಿಕೆಗಳಿಗೆ ನಾನು ಸಹಿ ಪಡೆದಿಲ್ಲ. ಪಿರ್ಯಾದಿ 2 ಕೋಟಿ ರೂಗಳನ್ನು 1 ಮತ್ತು 4 ನೇ ಆರೋಪಿತರಿಗೆ ಅವರ ಸ್ವತ್ತನ್ನು ಜೆಡಿ ಮಾಡಿಕೊಂಡು ಅಪಾರ್ಟ್‌ಮೆಂಟ್ ಕಟ್ಟಿ ಬೇರೆಯವರಿಗೆ ವರ್ಗಾವಣೆ ಮಾಡಿದ್ದು, ಆ ಹಣವನ್ನು ಆರೋಪಿತರಿಗೆ ಕೊಟ್ಟಿಲ್ಲ ಎಂದರೆ ಸರಿ. ಆ ಹಣವನ್ನು ಕೊಡುವುದನ್ನು ತಪ್ಪಿಸಿಕೊಳ್ಳಲು ಪಿರ್ಯಾದಿ ಹೈದರಾಬಾದ್ ಗೆ ಓಡಿಹೋಗಿದ್ದ ಎಂದರೆ ಗೊತ್ತಿಲ್ಲ. ನನಗೆ ಎಲ್ಲಾ ವಿಷಯ ಗೊತ್ತಿದ್ದು, ಆರೋಪಿತರು ಹಣ ಕಳೆದುಕೊಂಡಿದ್ದರು, ಅವರ ಮೇಲೆ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಹೋಗಿಲ್ಲ, ಪಂಚನಾಮೆ ಮಾಡಿಲ್ಲ, ಸ್ವಇಚ್ಛಾ ಹೇಳಿಕೆ ಮಾಡಿಕೊಂಡಿಲ್ಲ ಮತ್ತು ಠಾಣೆಗೆ ಬಂದಿದ್ದ ಆರೋಪಿತರನ್ನು ಹಾಗೇ ಕಳುಹಿಸಿದ್ದೆ ಎಂದರೆ ಸರಿಯಲ್ಲ. ಪಿರ್ಯಾದಿ ಈಗಲೂ ನನ್ನ ಸಂಪರ್ಕದಲ್ಲಿದ್ದಾರೆ ಎಂದರೆ ಸರಿಯಲ್ಲ. ಪಿರ್ಯಾದಿಗೆ ನಾನು ನ್ಯಾಯಾಲಯಕ್ಕೆ ಬರಲು ತಿಳಿಸಿದಾಗ ಅವರು ಹಣಕೊಟ್ಟ ನಂತರ ಬರುತ್ತೇನೆ ಎಂದು ಹೇಳಿದ್ದಾರೆ ಎಂದರೆ ಸರಿಯಲ್ಲ. ನಾನು ಪಿರ್ಯಾದಿಗೆ ಸಹಾಯ ಮಾಡಲು ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿ ಚಾಕುವಿನಿಂದ ಪಿರ್ಯಾದಿಗೆ ಚುಚ್ಚಲು ಪ್ರಯತ್ನಿಸಿಲ್ಲ ಮತ್ತು ಆ ಕಾರಣದಿಂದ ನಾನು ಆ ಚಾಕುವನ್ನು ಜಪ್ತಿ ಮಾಡಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ</u>

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

ಸಹಿ/-
**(ಶ್ರೀಮತಿ. ಬಿ.ಎಸ್.ರೇಖಾ )**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.